ಮೂಲ ದಾವಾ ಸಂಖ್ಯೆ. 127/2017 ಡಿ ಡಬ್ಲ್ಯೂ 3

(ದಿನಾಂಕ 07-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎ ಕೆ ವಕೀಲರಿಂದಃ-

ದಾವಾ ಜಮೀನು ಸರ್ವೆ ನಂ.107 ಸಿ ಇರುತ್ತದೆ. ಈ ದಾವೆಯನ್ನು ಯಾರು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಕಾರಣಕ್ಕೆ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರ ಹೆಸರು ಉಗ್ಗಣ್ಣನವರ ನಾಗಪ್ಪ. ನನ್ನ ತಂದೆಯ ತಂದೆ ಹೆಸರು ದೊಡ್ಡಕರಿಯಪ್ಪ ಎಂದರೆ ಸರಿ. ದೊಡ್ಡಕರಿಯಪ್ಪ ಇವರಿಗೆ ನನ್ನ ತಂದೆ ನಾಗಪ್ಪ ಮತ್ತು ನನ್ನ ದೊಡ್ಡಪ್ಪ ಹುಲುಗಪ್ಪ ಇವರು ಮಕ್ಕಳು ಎಂದರೆ ಸರಿ. ನನ್ನ ಅಜ್ಜನ ಸಹೋದರ ಸಣ್ಣ ಕರಿಯಪ್ಪ ಇವರಿಗೆ ಎಷ್ಟು ಜನ ಮಕ್ಕಳು ಎನ್ನುವುದು ನನಗೆ ಗೊತ್ತಿಲ್ಲ.

ದಾವಾಸ್ತಿಯು ಮೂಲತಃ ದೇವಪ್ಪ ಇವರದು. ದಾವಾ ಜಮೀನು ದೇವಪ್ಪ ಇವರ ಹೆಸರಿನಲ್ಲಿರುವ ಬಗ್ಗೆ ಯಾವ ದಾಖಲೆ ನೋಡಿದ್ದೀರಿ ಎಂದರೆ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ. ನಾಗಮ್ಮ ಇವರ ತಂದೆಯ ಹೆಸರು ಸಂಗಪ್ಪ. ಸದರಿ ಸಂಗಪ್ಪ ಇವರ ತಂದೆಯ ಹೆಸರು ಏನು ಎನ್ನುವುದು ನನಗೆ ಗೊತ್ತಿಲ್ಲ, ನಾಗಮ್ಮ ಇವರಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದು ನನಗೆ ಗೊತ್ತಿಲ್ಲ. ಒಳಗುಂದಿ ಕೊಟ್ರಪ್ಪ ಇವರಿಗೆ ದಾವಾಸ್ತಿಯನ್ನು ದೊಡ್ಡಕರಿಯಪ್ಪ ಇವನು ಕೊಟ್ಟಿರುತ್ತಾನೆ. ಅದನ್ನು ಅವನು ಬಾಯಿ ಮಾತಿನ ಮೂಲಕ ಕೊಟ್ರಪ್ಪ ಇವರಿಗೆ ಕೊಟ್ಟಿರುತ್ತಾನೆ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ಮಾಹಿತಿ ನಾನೇ ನೀಡಿದ್ದೇನೆ. ದಾವಾಸ್ತಿ ಸಣ್ಣಕರಿಯಪ್ಪ ಇವರ ಭಾಗಕ್ಕೆ ಬಂದಿದ್ದು ಉಳಿದ ವಿಸ್ತೀರ್ಣ 3.40 ಎಕರೆ ಜಮೀನು ದೊಡ್ಡಕರಿಯಪ್ಪನ ಮಕ್ಕಳಾದ ಉಗ್ಗಣ್ಣನವರ ಹುಲುಗಪ್ಪ, ಉಗ್ಗಣ್ಣನಗರ ನಾಗಪ್ಪ ಮತ್ತು ಭರಮವ್ವ ಇವರಿಗೆ ಸೇರಿರುತ್ತದಂತಾ ಯಾವ ದಾಖಲೆ ನೋಡಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಪಟ್ಟಾ ಮತ್ತು ಪಹಣಿ ನೋಡಿ ಹೇಳಿರುತ್ತೇನೆ ಎನ್ನುತ್ತಾರೆ. ಸದರಿ ಪಹಣಿಯು 1980 ರಿಂದ 1986 ರ ಪಹಣಿ ಇರುತ್ತದೆ.

ನನಗೆ ನಾಗಮ್ಮ ಅಕ್ಕನಾಗಬೇಕು. ನಾಗಮ್ಮ ನನಗೆ ಅಕ್ಕನಾಗಿರುವುದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ